# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-182 ಪದ್ಮನಾಭನಗರ, ಬೆಂಗಳೂರು

ಸಂ: ಸ.ಅ/ವಾ-182/ಪಿ.ಆರ್/07/2020-21 ದಿನಾಂಕ : 06-02-2020

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :06-02-2021 ರಂದು ವಾರ್ಡ್ ಸಂಖ್ಯೆ-182 ಪದ್ಮನಾಭನಗರದ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.**

1) ಶ್ರೀ ನರಸಿಂಹಮೂರ್ತಿ ಜಂಟಿ ಆಯುಕ್ತರು ದಾಸರಹಳ್ಳಿ, ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.

2) ಶ್ರೀ ಶಿವಶಂಕರ್, ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-9 ಉಪ ವಿಭಾಗ.

3) ಶ್ರೀ ಶಂಕರ್ ಬಹದ್ದೂರ್ ಸಿಂಗ್, ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.

4) ಶ್ರೀ ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ, ಬಿ.ಬಿ.ಎಂ.ಪಿ.

5) ಶ್ರೀಮತಿ ಐಶ್ವರ್ಯ.ಬಿ.ಎ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ.

6) ಶ್ರೀ ಪ್ರಶಾಂತ್, ಸಹಾಯಕರು, ಬಿ.ಬಿ.ಎಂ.ಪಿ ವಿಧ್ಯುತ್ ಉಪ ವಿಭಾಗ (ದಕ್ಷಿಣ).

7) ಶ್ರೀ ಅಪ್ಪಾಜಿಗೌಡ ಸಹಾಯಕ ಆರಕ್ಷಕ ನಿರೀಕ್ಷಕರು, ಬನಶಂಕರಿ ಸಂಚಾರಿ ಠಾಣೆ.

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಪದ್ಮನಾಭನಗರ ಬಡಾವಣೆ ವಾರ್ಡ್ ಸಂಖ್ಯೆ-182 ರವರಾದ ಶ್ರೀ ರಾಘವೇಂದ್ರ.ಟಿ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂಖ್ಯೆ | ವಿಷಯ | ಷರಾ |
|---|---|---|
| 1 | ಕೃಷ್ಣ ಅರಮನೆ ಹೋಟೇಲ್ ಕುಮಾರಸ್ವಾಮಿ ಬಡಾವಣೆ ಇಲ್ಲಿ ಹೊಟೇಲ್‌ಗೆ ಬರುವ ಗ್ರಾಹಕರು ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ವಾರ್ಡ್ ಸಮಿತಿ ಸದಸ್ಯರು ತಿಳಿಸಿದರು. | ಕುಮಾರಸ್ವಾಮಿ ಬಡಾವಣೆ ಸಂಚಾರಿ ಠಾಣೆಯ ಠಾಣಾಧಿಕಾರಿಗಳ ಮುಂದಿನ ಕ್ರಮಕ್ಕಾಗಿ. |
| 2 | ಗೌಡನಪಾಳ್ಯ ಶ್ರೀನಿವಾಸ ಟೆಂಟ್ ರಸ್ತೆಯಲ್ಲಿರುವ ಕಸ ಹಾಗೂ ಮಣ್ಣನ್ನು ತೆರವುಗೊಳಿಸಿಕೊಡುವಂತೆ ವಾರ್ಡ್ ಸಮಿತಿ ಸದಸ್ಯರು ಕೋರಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |
| 3 | ಕುಮಾರಸ್ವಾಮಿ ಬಡಾವಣೆ 15 ಎಫ್ ಬಸ್ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಆಗಿದಾಗ್ಗೆ ವಿಧ್ಯುತ್ ವ್ಯತಯವಾಗುತ್ತಿದ್ದು, ಇದನ್ನು ಸರಿಪಡಿಸಿಕೊಡುವಂತೆ ವಾರ್ಡ್ ಸಮಿತಿ ಸದಸ್ಯರು ಕೋರಿದರು. | ಸ.ಕಾ.ನಿ.ಅ/ ಸ.ಅ (Bescom) ರವರ ಕ್ರಮಕ್ಕಾಗಿ. |
| 4 | ಘನತ್ಯಾಜ್ಯ ನಿರ್ವಹಣೆಯಲ್ಲಿ ಮನೆ ಮನೆಗೆ ತೆರಳಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು |

Scanned by CamScanner

| | | |
|---|---|---|
| | ಕಸವನ್ನು ಸಂಗ್ರಹಿಸದಿರುವುದು ಗಮನಕ್ಕೆ ಬಂದಿರುವುದಾಗಿ ನೋಡೆಲ್ ಅಧಿಕಾರಿಯವರು ತಿಳಿಸಿದರು ಹಾಗೂ ಪೌರಕಾರ್ಮಿಕರಿಗೆ ಸೂಕ್ತ ಸುರಕ್ಷತಾ ಸಾಮಾಗ್ರಿಗಳು, ಕೆಲಸದ ಸಾಮಾಗ್ರಿಗಳನ್ನು ನೀಡದೇ ಇರುವುದನ್ನು ಮುಂಜಾನೆಯ ಪರಿವೀಕ್ಷಣೆ ಸಮಯದಲ್ಲಿ ಗಮನಿಸಿರುವುದಾಗಿ ಸಹ ನೋಡಲ್ ಅಧಿಕಾರಿಯವರು ಸಭೆಗೆ ತಿಳಿಸಿದರು | (ಘನತ್ಯಾಜ್ಯ) ರವರ ಮುಂದಿನ ಕ್ರಮಕ್ಕಾಗಿ. |
| 5 | ಗುರುರಾಜ ಬಡಾವಣೆಯ ಬೃಹತ್ ನೀರುಗಾಲುವೆ ಬಳಿ ನಿರ್ಮಿಸುತ್ತಿರುವ ತಡೆಗೋಡೆ ಬಗ್ಗೆ ಸಾರ್ವಜನಿಕರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಸಭೆಯಲ್ಲಿ ತಿಳಿಸಿದರು. | ಸದರಿ ವಿಷಯವನ್ನು ಕಾರ್ಯಪಾಲಕ ಅಭಿಯಂತರರು ಯೋಜನೆ ರವರ ಗಮನಕ್ಕೆ ತಂದು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. |
| 6 | 14ನೇ ಮುಖ್ಯರಸ್ತೆ ಪದ್ಮನಾಭನಗರ ಇಲ್ಲಿ ರಸ್ತೆ ಗುಂಡಿಗಳಿದ್ದು, ಅವುಗಳನ್ನು ಮುಂಚುವಂತೆ ಸಾರ್ವಜನಿಕರು ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |

ಸಭೆಯಲ್ಲಿ ಇತರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಸಹಾಯಕ ಅಭಿಯಂತರರು

ವಾರ್ಡ್ 182 ರ ನೋಡಲ್ ಅಧಿಕಾರಿ
ಹಾಗೂ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ.

Scanned by CamScanner